


### ಸಾಧಕ–ಬಾಧಕ

'ಗಜರಾಜನ ಕುಟುಂಬ ಯೋಜನೆ', ಪ್ರವೀಣ ಕುಲಕರ್ಣಿ ಅವರ ಮುಖ ಪುಟ ಲೇಖನ (ಸುಧಾ ಫೆ.1) ಓದಿ ಮನಸ್ಸಿಗೆ ನೋವಾಯಿತು. ಹೆಣ್ಣಾನೆಗಳಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆಯ ಸಾಧಕ–ಬಾಧಕಗಳ ಕುರಿತು ಚೆನ್ನಾಗಿ ವಿವರಿಸಿದ್ದಾರೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ,
ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ,
ಕೆ.ಪಿ.ರಾಮಗುಂಡಿ ಬೈಲಹೊಂಗಲ

### ನೆಮ್ಮದಿಗೆ ಭಂಗ

ಲೇಖನ ಚಿಂತನಾರ್ಹ. ರೆಸಾರ್ಟ್‌ಗಳ ನಿರ್ಮಾಣ, ಕಾಡ್ಗಿಚ್ಚಿನಿಂದ ಅರಣ್ಯನಾಶ, ಪ್ರವಾಸಿಗರಿಂದಲೂ ಕಾಡುಪ್ರಾಣಿಗಳ ನೆಮ್ಮದಿಗೆ ಭಂಗ ಬರುತ್ತಿದೆ. ಸಂತಾನಹರಣದಿಂದ ಆನೆಗಳ ಸ್ವಾಭಾವಿಕ ಜೀವನದ ಮೇಲೆ ಪ್ರಹಾರ ಸಲ್ಲದು. ಮುಂದೊಂದು ದಿನ ಆನೆಗಳ ಸಂತತಿ ಕಡಿಮೆ ಆಗಿದೆಯೆಂದು ಚಿಂತಿಸುವ ಕಾಲ ಬರಬಹುದು. ಮಕ್ಕಳಿಗೆ ಚಿತ್ರ ತೋರಿಸಬೇಕಾದೀತು.

–ಮಹಾವೀರ ಕಾಸರ, ಶಿವಮೊಗ್ಗ,
ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಅನನ್ಯ ಚಿತ್ರಣ

'ವಿಚಾರ ಲಹರಿ' ಯ 'ಮಾಗಿಯ ಮೌನ' (ಶಿಕಾಕು)ದಲ್ಲಿ ಮಾಗಿದ ಎಲೆಯ ಪ್ರತಿಮೆಯಲ್ಲಿ ಸಕಲ ಜೀವ ಜಾಲದ ಚಕ್ರ ಚಲಿಸುವುದನ್ನು ಚಿತ್ರಿಸಿರುವ ರೀತಿ ಅನನ್ಯವಾಗಿದೆ.

–ಡಾ. ಜಿ. ಕೃಷ್ಣಪ್ಪ ಬೆಂಗಳೂರು,
ನಾಗರತ್ನ ಮಂಜುನಾಥ್, ರಾಚೇನಹಳ್ಳಿ

### ಮುಷ್ಕರಕ್ಕೆ ಕಾರಣ

'ನಿಮ್ಮೊಡನೆ'ಯಲ್ಲಿ 'ಮುಷ್ಕರದಿಂದಾಗುವ ನಷ್ಟ' (ಬಿ.ಎಂ. ಹನೀಫ್) ಅರ್ಥಪೂರ್ಣವಾಗಿದೆ. ಉದ್ಯಮಪತಿಗಳಿಗೆ, ಕಾರ್ಮಿಕರಿಗೆ ರಾಷ್ಟ್ರಗೌರವದ ಅಭಾವ ಮುಷ್ಕರಕ್ಕೆ ಕಾರಣ. ಜಪಾನ್‌ನಲ್ಲಿ ಕಾರ್ಮಿಕರು ಹೆಚ್ಚು ಕಾಲ ಕೆಲಸ ಮಾಡಿ ಅತೃಪ್ತಿ ಪ್ರಕಟಿಸುತ್ತಾರೆ. ದೇಶಾಭಿಮಾನಕ್ಕೆ ಜಪಾನ್ ಕಾರ್ಮಿಕರು ಮಾದರಿ.

–ರತ್ನಾಕರ ಹೆಗಡೆಕಟ್ಟೆ ಮೂಡುಬಿದಿರೆ,
ರಾಜಶೇಖರ ಹಾದಿಮನಿ ಧಾರವಾಡ,
ಶ್ರೀನಾಥ್ ಕೋನೇಟಿ ಬೆಂಗಳೂರು

### ಸುಂದರ ಕೋಟೆ

'ಗುಡಿಯೂ ಸುಂದರ ಬಂಡೆಯೂ ಸುಂದರ' (ಶಿವಪ್ರಕಾಶ ಬೋಗಣ್ಣ) ಲೇಖನ ಮನಸ್ಸಿಗೆ ಸಂತೋಷ ತಂದಿತು. ವಾರಾಂತ್ಯದ ತಿರುಗಾಟಕ್ಕೆ ಪ್ರಶಸ್ತ ತಾಣವಿದು.

–ರವೀಂದ್ರನಾಥ ಶಿ. ಯಡಹಳ್ಳಿ ಬಾಗಲಕೋಟೆ

### ಮುದ ನೀಡಿತು

'ಅಘನಾಶಿನಿಯ ದೃಶ್ಯಕಾವ್ಯ' (ಪಾಂಡುರಂಗ ಹೆಗಡೆ) ಲೇಖನ ಚೆನ್ನಾಗಿದೆ. ಕಾರವಾರ ಜಿಲ್ಲೆಯಲ್ಲಿ ಶೇ. 80 ದಟ್ಟಡವಿಗಳು, ತೊರೆಗಳು, ನದಿಗಳು, ಜಲಪಾತಗಳು ಇದ್ದು, ಇವುಗಳ ದರ್ಶನ ರಮಣೀಯ.

–ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಆಕರ್ಷಕ ಗಾರ್ಡನ್

ಪ್ರವಾಸ ಪುಟದಲ್ಲಿ 'ಸುರ್ಝೋ ಗಾರ್ಡನ್' (ರಮೇಶ್ ಶೆಟ್ಟಿಗಾರ್) ಬರಹ ಆಕರ್ಷಕ. ತನ್ನ ಪ್ರಾಚೀನ ನೈಸರ್ಗಿಕ ಸೌಂದರ್ಯದ ಮೂಲಕ ವಿಶ್ವ ಪ್ರವಾಸಿಗರನ್ನು ಸೆಳೆಯುತ್ತಿರುವ ಚೀನಾದ ಈ ಗಾರ್ಡನ್ 'ವಿಶ್ವ ಪಾರಂಪರಿಕ ತಾಣ'ವೆಂಬ ಪ್ರಶಸ್ತಿಗೆ ಭಾಜನವಾಗಿ ತನ್ನತನವನ್ನು ಉಳಿಸಿಕೊಂಡಿರುವುದು ಸ್ವಾಗತಾರ್ಹ.

–ಕೋಟೇಶ್ವರ ಸೂರ್ಯನಾರಾಯಣ ರಾವ್
ಬೆಂಗಳೂರು

### ಕಾಶಿನಾಥ್ ಒಳ್ಳೆಯ ಗುರು

'ಕಾಶಿನಾಥ್‌ಗೆ ವಿದಾಯ' (ವಿ.ಮನೋಹರ್) ಲೇಖನ ಆಪ್ತವಾಗಿದೆ. ನಟ ಕಾಶಿನಾಥ್ ನಿಜಕ್ಕೂ ಒಬ್ಬ ಪ್ರತಿಭಾನ್ವಿತ. ಜನವರಿ 18 ರಂದೇ ಅವರು ನಿಧನ ಹೊಂದಿದ್ದು, ಭಾರತೀಯ ಚಿತ್ರರಂಗದ ಅನೇಕ ಖ್ಯಾತನಾಮರೂ ಇದೇ ತಾರೀಕಿನಂದು ನಿಧನ ಹೊಂದಿದ್ದಾರೆ. ಎನ್.ಟಿ. ರಾಮರಾವ್, ಕೆ.ಎಸ್. ಅಶ್ವಥ್, ಕುಂದನಲಾಲ ಸಹಗಾಲ್.. ಈಗ ಕಾಶಿನಾಥ್. ತಮ್ಮ ಗುರುವನ್ನು ನೆನೆದು ಅವರ ಶಿಷ್ಯರೆಲ್ಲ 'ಹೋದೆಯ ದೂರ ಓ ಗುರುರಾಯಾ' ಎಂದು ಕಂಬನಿ ಮಿಡಿದಿದ್ದಾರೆ. ಕಾಶಿನಾಥ್ ನಿಜಕ್ಕೂ ಒಬ್ಬ ಅಪರೂಪದ ಕಿಂಗ್ ಮೇಕರ್.

–ಮುಕುಂದ ಹೆರಕಲ್ಲ, ಕಲಬುರ್ಗಿ, ಸುಂದರ್
ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ,
ಬಿ.ಎಸ್. ರಮೇಶ್ ಬೆಂಗಳೂರು,
ವಿಭಾ ಮುರಳೀಧರ್ ತುಮಕೂರು

### ಸಮಯೋಚಿತ

ಕನ್ನಡದ ಅಕ್ಷರಮಾಲೆ ಶುರುವಾಗುವುದೆ 'ಅ' ಅಕ್ಷರದಿಂದ. ಅಂತಹ 'ಅ' ಅಕ್ಷರದಿಂದ ಆರಂಭವಾಗುವ ಅಪರೂಪದ ಅತಿಥಿಗಳು, ಅಪರಿಚಿತ, ಅನುಭವ, ಅನಾಮಿಕ, ಅಗೋಚರ, ಅನಂತನ ಅವಾಂತರ, ಅವಳೇ ನನ್ನ ಹೆಂಡ್ತಿ ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ ಸಾತ್ವಿಕ, ಸಜ್ಜನ, ಸೃಜನಶೀಲ ನಟ ಕಾಶಿನಾಥ್ ಸ್ಮರಣೆ ಲೇಖನ ಸಮಯೋಚಿತ.

–ಪಿ. ಜಯವಂತ ಪೈ, ಕುಂದಾಪುರ

### ಸಕಾಲಿಕ ಬರಹ

'ಪರೀಕ್ಷೆಯನ್ನು ಸಂಭ್ರಮಿಸಿ' (ಎಚ್.ಎಸ್. ನವೀನ್ ಕುಮಾರ್ ಹೊಸದುರ್ಗ) ಲೇಖನ ಸಕಾಲಿಕ. ಪರೀಕ್ಷೆಗೆ ಸಿದ್ಧವಾಗುವ ವಿದ್ಯಾರ್ಥಿಗಳಿಗೆ ಅತಿ ಉಪಯುಕ್ತ ಮಾಹಿತಿಗಳು ಲಭ್ಯ.

–ಎ.ಕೆ. ಪಟ್ಟಾಭಿ, ಬೆಂಗಳೂರು,
ನಾರಾಯಣ ಯಾಜಿ, ಶಿರಾಲಿ

### ಎಳೆಯರ ಪದ್ಯ

'ಎಳೆಯರ ಅಂಗಳ'ದಲ್ಲಿ ಮಕ್ಕಳ ಕವಿತೆ 'ಊರಿಗೊಂದು ವನ' (ಸಂಗಮೇಶ ಗುಜಗೊಂಡ) ಚೆನ್ನಾಗಿದೆ. ಹಾಗೇ ಬಿ. ಪಾಂಡುರಂಗಯ್ಯ ದಾವಣಗೆರೆ ಅವರ ಕತೆ 'ನಿಜವಾದ ವಿದ್ಯೆ ಯಾವುದು?' ಸಹ ಆಸಕ್ತಿ ಮೂಡಿಸುವಂತಿದೆ.

– ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ

### ರೋಗ ನಿರೋಧಕ ಶಕ್ತಿ

'ಫಿಟ್‌ನೆಸ್' ಅಂಕಣದಲ್ಲಿ 'ರೋಗ ನಿರೋಧಕ ಶಕ್ತಿ ಕಡಿಮೆ ಆಗಿದೆಯೇ?' (ಡಾ. ಶ್ವೇತ ಹೊನ್ನುಂಗರ) ಬರಹ ಉಪಯುಕ್ತ.

–ನರೇಂದ್ರ ಸಿರಕಜೆ, ಮೈಸೂರು

### ಧಾರಾವಾಹಿ ಚಿತ್ರ

ಧಾರಾವಾಹಿ 'ಮೋಹ ಚುಂಬಿತ ಮಾಯೆ'ಗಾಗಿ ಮೋನಪ್ಪ ರಚಿಸಿರುವ ಚಿತ್ರ ಅತ್ಯಂತ ಮನೋಹರ.

– ಕೊ.ಸು.ನರಸಿಂಹಮೂರ್ತಿ ಮೈಸೂರು

### ಒಂದು ಪುಟ ಮೀಸಲಿಡಿ

'ಸಮುದ್ರ ಮಥನ' ಅಂಕಣಕ್ಕೆ ಈ ವರ್ಷದ ನಾಲ್ಕನೆ ಸಂಚಿಕೆಯಲ್ಲಿ ಬಹಳ ವರ್ಷಗಳ ನಂತರ ಪೂರ್ತಿ ಒಂದು ಪುಟ ಮೀಸಲಿಟ್ಟಿದ್ದು ಮನಸ್ಸಿಗೆ ಮುದ ನೀಡಿತು. ಈ ಸತ್ಸಂಪ್ರದಾಯ ಮುಂದುವರೆಯಲಿ.

–ಮುಕುಂದ ಎಚ್. ಕಲಬುರಗಿ

ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ "ಶ್ರೀ ಮಂಜುನಾಥ ಗುರೂಜಿ" ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ
9886999747